ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್–6/76/2019–20** **ದಿನಾಂಕ: 05.02.2020.**

ಗೆ,

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 30.01.2020 ರಂದು ಜರುಗಿದ 6 ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: **30.01.2020** ರಂದು ಪೂರ್ವಾಹ್ನ 11–00 ಗಂಟೆಗೆ ಜರುಗಿದ 6 ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು 5/2/20

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. Ambedkar Veedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್-6/76/2019-20** **ದಿನಾಂಕ: 05.02.2020.**

ದಿನಾಂಕ 30.01.2020 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 6 ನೇ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎಸ್. ಜಾಫ್ಲೆಟ್ | ಸಭಾಧ್ಯಕ್ಷರು |
| 2. | ಡಾ: ಎಂ. ಪಾಂಡುರಂಗಪ್ಪ | ಸದಸ್ಯರು |
| 3. | ಶ್ರೀ. ಹೆಚ್.ಆರ್. ಸತೀಶ್ | ಸದಸ್ಯರು |
| 4. | ಡಾ. ಬಿ.ಎ. ಅನುರಾಧಾ | ಸದಸ್ಯರು |
| 5. | ಡಾ. ಆರ್. ಪಾರ್ವತಿ | ಸದಸ್ಯರು |
| 6. | ಡಾ.ಇ.ಬಿ. ರಾಜೇಶ್ | ಸದಸ್ಯರು |
| 7. | ಶ್ರೀ ಡಿ.ಜಿ. ಶ್ರೀನಿವಾಸಮೂರ್ತಿ | ಸದಸ್ಯರು |
| 8. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 9. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 10. | ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 11. | ಡಾ.ಆರ್.ಕೆ. ಚಂದ್ರನಾಥ್ | ಸದಸ್ಯರು |
| 12. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 13. | ಡಾ. ವಿ.ಆರ್. ದೇವರಾಜು | ಸದಸ್ಯರು |
| 14. | ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 15. | ಪ್ರೊ: ವಿ. ಶಿವರಾಂ ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು ಎಲ್ಲ ಸದಸ್ಯರನ್ನು ಸ್ವಾಗತಿಸಿದ ನಂತರ ಕಾರ್ಯ ಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು

| | |
|---|---|
| ವಿಷಯ ಸಂಖ್ಯೆ– 1: | ದಿನಾಂಕ 23.12.2019 ರಂದು ಜರುಗಿದ ಸಿಂಡಿಕೇಟ್ 5 ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ಧೃಢೀಕರಿಸುವ ಕುರಿತು.<br><br>ಸಿಂಡಿಕೇಟ್ ನಿರ್ಣಯ:<br><br>ಸದಸ್ಯರು ನಡಾವಳಿಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸುವಾಗ ವೈಯುಕ್ತಿಕವಾಗಿ ಪತ್ರ ಅಥವಾ ಇ–ಮೇಲ್ ಮುಖಾಂತರ ಸಲ್ಲಿಸಬೇಕೆಂದು, ಒಟ್ಟಾಗಿ ಸಲ್ಲಿಸುವುದಾದಲ್ಲಿ, ಎಲ್ಲಾ ಸದಸ್ಯರು ಸಹಿಮಾಡಿ ಸಲ್ಲಿಸಬೇಕೆಂದು ಕುಲಪತಿಗಳು ತಿಳಿಸಿದರು.<br><br>ಅ) ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್‌ರವರು ಸಲ್ಲಿಸಿದ ಸಾಮಾನ್ಯ ಅವಲೋಕನಗಳು **(General observation)** ಕುರಿತಂತೆ ಈಗಾಗಲೇ ಪರಿನಿಯಮಗಳ ಪ್ರಕಾರ ತೆಗೆದುಕೊಂಡ ತೀರ್ಮಾನಗಳನ್ನು ಸಭೆಯಲ್ಲಿ ಓದಿ ದಾಖಲಿಸಲಾಗುತ್ತಿರುವುದನ್ನು ಸಭೆಗೆ ತಿಳಿಸಲಾಯಿತು. ತೀರ್ಮಾನಗಳನ್ನು ಸಿಂಡಿಕೇಟ್ ಸಭೆಗೆ ಓದಿ ಹೇಳಿ ದಾಖಲಾಗುತ್ತಿರುವುದರಿಂದ 7 ದಿವಸಗಳ ವರೆಗೆ ಕಾಯದೇ ಕ್ರಮ ಕೈಕೊಳ್ಳಬಹುದೆಂದು ತೀರ್ಮಾನಿಸಲಾಯಿತು.<br><br>ನಡಾವಳಿಗಳನ್ನು ಆದಷ್ಟು ಬೇಗ ಹೊರಡಿಸಲಾಗುವುದೆಂದು ತಿಳಿಸಲಾಯಿತು.<br><br>ಆ) ಸಿಂಡಿಕೇಟ್ ನಡಾವಳಿಗಳ ಮೇಲೆ ಮಾಡಲಾದ ನಿರ್ದಿಷ್ಟ ಅವಲೋಕನಗಳು **(Specific observation )** ಕುರಿತು ಕೆಳಗಿನಂತೆ ತೀರ್ಮಾನಗಳನ್ನು ಪರಿಷ್ಕರಿಸಿ ಧೃಢೀಕರಿಸಲಾಯಿತು:<br>**I. Action taken Report on Item No: 17 (23.12.2019)**<br><br>ಸಿಂಡಿಕೇಟ್ ತೀರ್ಮಾನ:<br><br>ಚರ್ಚೆಯ ನಂತರ, ಡಾ: ಅಜಿತ್ ಸಬ್ನಿಸ್, ತಾಂತ್ರಿಕ ಸಲಹೆಗಾರರು, ಇವರಿಗೆ ವಿಶ್ವವಿದ್ಯಾಲಯ ನೀಡಿದ ಆದೇಶದ ದಿನಾಂಕದಿಂದ ಪ್ರತಿ ತಿಂಗಳಿಗೆ ರೂ.**50,000/–** ಗೌರವ ಧನ ಪಾವತಿಸಲು ತಾತ್ವಿಕ ಅನುಮೋದನೆ ನೀಡಲಾಯಿತು. ಸದಸ್ಯರಾದ ಶ್ರೀ ಹೆಚ್.ಆರ್. ಸತೀಶ್ ರವರು ಸಲ್ಲಿಸಿದ ವರದಿಯನ್ನು ಕಾಮಗಾರಿ ಸಮಿತಿಯ **(Works** |

| | |
|---|---|
| | **Committee)** ಪರಿಶೀಲನೆಗೆ ಮಂಡಿಸಿ ನಂತರ ಸಿಂಡಿಕೇಟ್ ಸಭೆಯ ಒಪ್ಪಿಗೆ ಪಡೆದು ಗೌರವ ಧನ ಪಾವತಿಸಲು ತೀರ್ಮಾನಿಸಲಾಯಿತು.<br>**II.** ಗ್ರಂಥಾಲಯ ಸಮಿತಿಯ ನಡಾವಳಿಯ ಕ್ರಮ ಸಂಖ್ಯೆ 5 ರಲ್ಲಿರುವ "ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಭೌತಶಾಸ್ತ್ರ ಸಭಾಂಗಣದಲ್ಲಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಅಂತರಜಾಲ ಸೌಲಭ್ಯ ಒದಗಿಸಲು 100 ಗಣಕಯಂತ್ರಗಳನ್ನು ಅಳವಡಿಸುವ ಬಗ್ಗೆ". ಈ ವಿಷಯವನ್ನು ಗ್ರಂಥಾಲಯ ಸಮಿತಿಯ ನಡಾವಳಿಯಿಂದ ಕೈಬಿಟ್ಟು, ನೇರವಾಗಿ ಕೇಂದ್ರೀಯ ಖರೀದಿ ಸಮಿತಿಯಲ್ಲಿ ಮಂಡಿಸಿ ನಂತರ ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಬೇಕೆಂದು ಸಿಂಡಿಕೇಟ್ ತೀರ್ಮಾನಿಸಿತು.<br>ದಿನಾಂಕ **23.12.2019** ರ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮೇಲಿನ ತಿದ್ದುಪಡಿಗಳಿಗೆ ಒಳಪಟ್ಟು ಧೃಢೀಕರಿಸಲಾಯಿತು. |
| ವಿಷಯ ಸಂಖ್ಯೆ– 2: | ದಿನಾಂಕ 23.12.2019 ರಂದು ಜರುಗಿದ ಸಿಂಡಿಕೇಟ್ 5ನೇ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಕೊಂಡ ಕ್ರಮದ ವರದಿ<br>7) ವಿಶ್ವವಿದ್ಯಾಲಯದಲ್ಲಿ ಸಂಚಿತ ವೇತನದ ಮೇಲೆ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಮುಂದುವರೆಸುವ ಕುರಿತು ಸದಸ್ಯರು ಪ್ರಸ್ತಾಪಿಸಿದರು. ಬೆಂಗಳೂರು, ತುಮಕೂರು ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳಲ್ಲಿ ಈ ರೀತಿಯ ಸಿಬ್ಬಂದಿಗಳ ಸೇವೆಯನ್ನು ವಿಶ್ವವಿದ್ಯಾಲಯದ ವತಿಯಿಂದ ಪಡೆಯುತ್ತಿರುವುದರ ಕುರಿತು ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ ಗುತ್ತಿಗೆ ಆಧಾರದ ಮೇಲೆ ನೇರವಾಗಿ ಸೇವೆ ಪಡೆಯಲು ಇರುವ ನಿಯಾಮಾವಳಿಗಳನ್ನು ಪರಾವರ್ಶಿಸಬೇಕೆಂದು ಸದಸ್ಯರು ತಿಳಿಸಿದರು. ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಸಂಚಿತ ವೇತನದ ಸಿಬ್ಬಂದಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ನಿಯಮಾವಳಿಗಳ ಪ್ರಕಾರ ಕ್ರಮ ಕೈಕೊಳ್ಳಬೇಕೆಂದು ಸದಸ್ಯರು ಅಭಿಪ್ರಾಯ ಪಟ್ಟರು. |

| | |
|---|---|
| | ಸಿಂಡಿಕೇಟ್ ತೀರ್ಮಾನ:<br><br>1. ಚರ್ಚೆಯ ನಂತರ, ಈ ಕುರಿತು ಕಾನೂನು ಸಲಹೆಗಾರರು, **DPAR** ಮತ್ತು ಕಾರ್ಮಿಕ ಆಯುಕ್ತರ ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು.<br><br>2. ನಿವೃತ್ತ ಅಧಿಕಾರಿ / ಸಿಬ್ಬಂದಿಗಳಿಗೆ ನೇಮಕಾತಿ ಆದೇಶ ನೀಡದಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ನಿವೃತ್ತ ಅಧಿಕಾರಿ / ಸಿಬ್ಬಂದಿಗಳಿಗೆ ಅವರು ನಿರ್ವಹಿಸಬೇಕಾದ ಕೆಲಸ ಸೂಚಿಸಿ ಆದೇಶ ನೀಡುವ ಕುರಿತು ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ನೇಮಕಾತಿ ಆದೇಶ ನೀಡಲು ಕ್ರಮ ಕೈಕೊಳ್ಳಬೇಕೆಂದು ಸೂಚಿಸಲಾಯಿತು.<br><br>15) Statute Drafting Committee ಗೆ ಅಧ್ಯಕ್ಷರಾಗಿ ನೇಮಕವಾಗಿರುವ ಡಾ. ಬಿ. ತಿಮ್ಮೇಗೌಡರವರು ಅನಾರೋಗ್ಯದ ಕಾರಣದಿಂದಾಗಿ ಸಮಿತಿಯ ಅಧ್ಯಕ್ಷರ ಕೆಲಸ ನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.<br><br>ಸಿಂಡಿಕೇಟ್ ತೀರ್ಮಾನ :<br><br>ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳು ಹಾಗೂ ನ್ಯಾಕ್ ಸಂಸ್ಥೆಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿರುವ ಡಾ. ಹೆಚ್. ಎ. ರಂಗನಾಥ ರವರನ್ನು ಸಮಿತಿಯ ಅಧ್ಯಕ್ಷರಾಗಿ ನೇಮಕ ಮಾಡಲು ಹಾಗೂ **DPAR** ನಲ್ಲಿ ಸೇವೆ ಸಲ್ಲಿಸಿದ ಅನುಭವ ಹೊಂದಿರುವ, ನಿವೃತ್ತ ಜಂಟಿ ಕಾರ್ಯದರ್ಶಿಗಳಾದ ಶ್ರೀ ಕೆ. ಆರ್. ಬಡಿಗೇರ್ ಅಥವಾ ಶ್ರೀ ಬಿ.ಎಸ್. ಜಾಪಾಲಿ ಇವರಲ್ಲಿ ಒಬ್ಬರನ್ನು ಸದಸ್ಯರಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆ ಒಪ್ಪಿಗೆ ನೀಡಿತು. |

| | |
|---|---|
| ವಿಷಯ ಸಂಖ್ಯೆ- 3: | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಗ್ರಂಥಾಲಯಕ್ಕೆ ಸಂಬಂಧಪಟ್ಟಂತೆ ಗ್ರಂಥಾಲಯ ಸಮಿತಿ ಪುನರ್ ರಚನೆ ಬಗ್ಗೆ<br><br>**ಸಿಂಡಿಕೇಟ್ ನಿರ್ಣಯ:**<br><br>**ಗ್ರಂಥಾಲಯ ಸಮಿತಿ ಪುನರ್ ರಚನೆಗೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.** |
| ವಿಷಯ ಸಂಖ್ಯೆ- 4: | ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಮಾತೃ ವಿಶ್ವವಿದ್ಯಾಲಯಕ್ಕೆ ಹಿಂದಿರುಗುವ ಇಚ್ಚೆ ಹೊಂದಿ ಸಲ್ಲಿಸಿರುವ ಮನವಿಗಳ ಬಗ್ಗೆ.<br><br>**ಸಿಂಡಿಕೇಟ್ ನಿರ್ಣಯ:**<br><br>**ಶ್ರೀ ಮಾರ್ಕಂಡೇಯ, ಪ್ರಯೋಗಾಲಯ ಸಹಾಯಕರು, ಶ್ರೀ ಎಸ್. ಸಿದ್ದಲಿಂಗೇಶ್ವರ, ಕಿರಿಯ ಸಹಾಯಕರು ಮತ್ತು ಶ್ರೀ ಎಂ.ಪಿ. ಮಂಜುನಾಥ್, ಗ್ರೂಪ್ 'ಡಿ' ಇವರನ್ನು ಹುದ್ದೆರಹಿತವಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮರು ವರ್ಗಾವಣೆ ಹೊಂದಲು ಸಹಮತಿ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.** |
| ವಿಷಯ ಸಂಖ್ಯೆ- 5: | Opening of a Bank Account to deposit the grants received towards the execution of Research Project(CESEM) granted to Department of Chemistry, BCU from VGST<br><br>**ಸಿಂಡಿಕೇಟ್ ನಿರ್ಣಯ:**<br><br>**ಕರ್ನಾಟಕ ಸರ್ಕಾರದ VGST ಯಿಂದ ರಸಾಯನ ಶಾಸ್ತ್ರ ವಿಭಾಗಕ್ಕೆ ಸಂಶೋಧನಾ ಯೋಜನೆ ಮಂಜೂರಾಗಿರುವುದಕ್ಕೆ ಸಿಂಡಿಕೇಟ್ ಸಭೆ ಡಾ.ಎಂ. ಪಾಂಡುರಂಗಪ್ಪ, Principal Investigator ಹಾಗೂ ರಸಾಯನ ಶಾಸ್ತ್ರ ವಿಭಾಗದ ಶಿಕ್ಷಕ ವೃಂದಕ್ಕೆ ಸಿಂಡಿಕೇಟ್ ಸಭೆ ಅಭಿನಂದನೆಗಳನ್ನು ಸಲ್ಲಿಸಿತು. ಸಂಶೋಧನಾ ಯೋಜನೆಗೆ ಮಂಜೂರಾಗಿರುವ ಅನುದಾನವನ್ನು ನಿರ್ವಹಿಸಲು Principal Investigator ಹಾಗೂ ವಿತ್ತಾಧಿಕಾರಿಗಳು ಜಂಟಿ ಪದನಾಮದಲ್ಲಿ ಬ್ಯಾಂಕ್ ಖಾತೆ ತೆಗೆಯಲು ಸಿಂಡಿಕೇಟ್ ಸಭೆ ಒಪ್ಪಿಗೆ ನೀಡಲಾಯಿತು.** |

| | |
|---|---|
| ವಿಷಯ ಸಂಖ್ಯೆ- 6: | ಶ್ರೀ ಶಿವಶಂಕರ ಭೈರವ, ಸಹಾಯಕ(ಅಮಾನತ್ತಿನಲ್ಲಿಡಲಾದ) ಇವರು ದೋಷರೋಪ ಪಟ್ಟಿಗೆ ನೀಡಿರುವ ಸಮಜಾಯಿಷಿಯ ಬಗ್ಗೆ<br>**ಸಿಂಡಿಕೇಟ್ ನಿರ್ಣಯ:**<br>**ಶ್ರೀ ಶಿವಶಂಕರ ಭೈರವ, ಸಹಾಯಕ (ಅಮಾನತ್ತು) ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಒಬ್ಬ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಲು ಸಿಂಡಿಕೇಟ್ ಸಭೆ ಒಪ್ಪಿಗೆ ನೀಡಲು ತೀರ್ಮಾನಿಸಿತು. ಕಾನೂನು ಸಲಹೆಗಾರರ ಹಾಗೂ ಸದಸ್ಯರಾರ ಶ್ರೀ ಹೆಚ್. ಎನ್. ಹರಿಪ್ರಸಾದ ಅವರೊಂದಿಗೆ ಸಮಾಲೋಚಿಸಿ, ಅವರ ಸಲಹೆ ಪ್ರಕಾರ ವಿಚಾರಣಾಧಿಕಾರಿಯ ಹಾಗೂ ಮಂಡನಾಧಿಕಾರಿಯವರ ನೇಮಕ ಮಾಡಲು ಅನುಮತಿ ನೀಡಲಾಯಿತು.**<br>**ಕೆ.ಸಿ.ಎಸ್.ಆರ್ ನಿಯಮಗಳ ಅನ್ವಯ ಶ್ರೀ ಶಿವಶಂಕರ ಭೈರವ ಅವರಿಗೆ ಲಭ್ಯವಾಗುವ Subsistence Allowance ನೀಡಲು ಮಂಜೂರಾತಿ ನೀಡಲಾಯಿತು.** |
| ವಿಷಯ ಸಂಖ್ಯೆ- 7: | ಶ್ರೀ ಬಿ. ಈಶ್ವರಾಚಾರಿ, ವಯೋನಿವೃತ್ತ ಅಧಿಕಾರಿ ಇವರನ್ನು ಕುಲಸಚಿವರ ಆಪ್ತಕಾರ್ಯಲಯದ ವಿಶೇಷಾಧಿಕಾರಿಯಾಗಿ ನೇಮಕ ಮಾಡಿರುವ ಬಗ್ಗೆ<br>ವಿಶೇಷಾಧಿಕಾರಿಗಳಿಗೆ ನೀಡುತ್ತಿರುವ ಸಂಚಿತ ಸಂಭಾವನೆಗಳ ಕುರಿತು ಸದಸ್ಯರಾದ ಶ್ರೀ ಶ್ರೀನಿವಾಸಯ್ಯ ವಿವರಣೆ ಬಯಸಿದರು. ಕುಲಸಚಿವರು ವಿವರಣೆ ನೀಡಿ ವಿಶ್ವವಿದ್ಯಾಲಯದಲ್ಲಿ 3 ಜನ ವಿಶೇಷಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದು ಅವರಲ್ಲಿ ಡಾ.ಶ್ರೀನಿವಾಸ ಅವರಿಗೆ ರೂ.60,000/- ಹಾಗೂ ಶ್ರೀ ಅಶೋಕ್ ಕುಲಕರ್ಣಿ ರೂ.40,000/- ಸಂಚಿತ ಸಂಭಾವನೆ ನೀಡಲಾಗುತ್ತಿದೆ ಎಂದು ತಿಳಿಸಿದರು.<br>ಕುಲಪತಿಗಳು ಮಾತನಾಡಿ ಶ್ರೀ ಪಿ. ನಾಗರಾಜು, ವಿಶೇಷಾಧಿಕಾರಿ 70 ವರ್ಷ ಪೂರ್ಣಗೊಳಿಸಿದ್ದು ಸೇವಾಮುಕ್ತರಾಗಿರುವುದರಿಂದ ಶ್ರೀ ಅಶೋಕ ಕುಲಕರ್ಣಿ, ವಿಶೇಷಾಧಿಕಾರಿ ಅವರು ತಮ್ಮ ಕೆಲಸದ ಜೊತೆಗೆ ಕುಲಪತಿಗಳ ಆಪ್ತಕಾರ್ಯಾಲಯದ ಕೆಲಸಗಳನ್ನು ನಿರ್ವಹಿಸಬೇಕಾಗಿದೆ ಎಂದು ತಿಳಿಸಿದರು. |

| | |
|---|---|
| | ಸದಸ್ಯರಾದ ಶ್ರೀ ಶ್ರೀನಿವಾಸಯ್ಯ ಮತ್ತು ಶ್ರೀ ಹರಿಪ್ರಸಾದ ರವರು ಇಬ್ಬರು ವಿಶೇಷಾಧಿಕಾರಿಗಳಾದ ಶ್ರೀ ಬಿ. ಈಶ್ವರಾಚಾರಿ ಹಾಗೂ ಶ್ರೀ ಅಶೋಕ್ ಕುಲಕರ್ಣಿ ಯವರಿಗೆ ರೂ.50,000/- ಪ್ರತಿ ತಿಂಗಳು ಸಂಚಿತ ವೇತನ ನೀಡಬೇಕೆಂದು ಪ್ರಸ್ತಾಪಿಸಿದರು.<br>**ಸಿಂಡಿಕೇಟ್ ನಿರ್ಣಯ:**<br>**ಶ್ರೀ ಬಿ. ಈಶ್ವರಾಚಾರಿ, ನಿವೃತ್ತ ಉಪ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ ಇವರನ್ನು ಕುಲಸಚಿವರ ಆಪ್ತಕಾರ್ಯಾಲಯದಲ್ಲಿ ವಿಶೇಷಾಧಿಕಾರಿಯಾಗಿ ನೇಮಕ ಮಾಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.**<br>**ಶ್ರೀ ಬಿ. ಈಶ್ವರಾಚಾರಿ ಹಾಗೂ ಶ್ರೀ ಅಶೋಕ್ ಕುಲಕರ್ಣಿ ವಿಶೇಷಾಧಿಕಾರಿಗಳಿಗೆ ಪ್ರತಿ ತಿಂಗಳು ರೂ.50,000/-(ರೂಪಾಯಿ ಐವತ್ತು ಸಾವಿರ) ಸಂಚಿತ ಸಂಭಾವನೆ ಮಂಜೂರಿಸಲು ಸಿಂಡಿಕೇಟ್ ಸಭೆ ಸರ್ವಾನುಮತದ ಒಪ್ಪಿಗೆ ನೀಡಿತು.** |
| ವಿಷಯ ಸಂಖ್ಯೆ- 8: | ಶೈಕ್ಷಣಿಕ ವಿಭಾಗದಲ್ಲಿ ಸಂಚಿತ ಸಂಭಾವನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಸ್. ಮೋಹನ್ ರವರ ಸೇವಾ ಮುಂದುವರಿಕೆ ಬಗ್ಗೆ<br>**ಸಿಂಡಿಕೇಟ್ ನಿರ್ಣಯ:**<br>**ಶ್ರೀ ಎಸ್. ಮೋಹನ್ ಇವರ ಸೇವೆಯನ್ನು 01.01.2020 ರಿಂದ ಆರು ತಿಂಗಳುಗಳ ಅವಧಿಗೆ ಮುಂದುವರೆಸಲು ಅನುಮತಿ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.** |
| ವಿಷಯ ಸಂಖ್ಯೆ- 9: | 2019-20 ನೇ ಶೈಕ್ಷಣಿಕ ವರ್ಷದಲ್ಲಿ ಸ್ನಾತಕ ಕೋರ್ಸುಗಳ 6 ಆಂಗ್ಲ ಭಾಷೆಯ ಪುಸ್ತಕಗಳ **E-books** ಗಳನ್ನು ಬಿಡುಗಡೆ ಮಾಡಲು ಪುಸ್ತಕಗಳ ಹೊರಪುಟ (cover page) ಹಾಗೂ ಒಳಪುಟಗಳನ್ನು ವಿನ್ಯಾಸಗೊಳಿಸಿದ ಬಗ್ಗೆ<br>2019-20 ನೇ ಶೈಕ್ಷಣಿಕ ಸಾಲಿನಲ್ಲಿ ಆಂಗ್ಲ ಭಾಷಾ ಪಠ್ಯ ಪುಸ್ತಕಗಳ E-books ಬಿಡುಗಡೆ ಮಾಡಲು ಹೊರಪುಟ ಹಾಗೂ ಒಳಪುಟಗಳ ವಿನ್ಯಾಸಗೊಳಿಸಲು ಜರುಗಿದ ಪ್ರಕ್ರಿಯ ಬಗ್ಗೆ ಕುಪತಿಗಳು ಸಭೆಗೆ |

| | |
|---|---|
| | ವಿವರಿಸಿದರು. ಕುಲಸಚಿವರ ಹೆಸರಿನಲ್ಲಿ ಬಂದಿರುವ ದರಪಟ್ಟಿಗಳನ್ನು ಸಂಯೋಜಕರು ತೆರೆದು ಕುಲಪತಿಗಳ ಸಹಿ ಪಡೆದಿರುವುದನ್ನು ಗಂಭೀರವಾಗಿ ಪರಿಗಣಿಸಿ ಸಂಭಂಧಿಸಿದ ಸಂಯೋಜಕರಿಗೆ ಎಚ್ಚರಿಕೆ ನೋಟೀಸು ನೀಡಬೇಕೆಂದು ಸದಸ್ಯರು ಅಭಿಪ್ರಾಯಪಟ್ಟರು.<br>**ಸಿಂಡಿಕೇಟ್ ನಿರ್ಣಯ:**<br>**2019–20 ನೇ ಶೈಕ್ಷಣಿಕ ಸಾಲಿನಲ್ಲಿ ಆಂಗ್ಲ ಭಾಷಾ ಪಠ್ಯ ಪುಸ್ತಕಗಳ E-books ಬಿಡುಗಡೆ ಮಾಡಲು ಹೊರಪುಟ ಹಾಗೂ ಒಳಪುಟಗಳ ವಿನ್ಯಾಸಗೊಳಿಸಲು ಬಿಲ್ಲು ಮೊತ್ತ ರೂ.63,436/- (ರೂಪಾಯಿ ಅರವತ್ತಮೂರು ಸಾವಿರದ ನಾಲ್ಕುನೂರ ಮೂವತ್ತಾರು) ಗಳನ್ನು M/s. Fertile Land Productions, Bengaluru – 73 ರವರಿಗೆ ಪಾವತಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**<br>**ದರ ಪಟ್ಟಿಗಳನ್ನು ತೆರೆಯುವುದರಲ್ಲಿ ಆಗಿರುವ ಅಚಾತುರ್ಯಕ್ಕಾಗಿ ಪ್ರಸಾರಂಗದ ಸಂಯೋಜಕರಿಗೆ ಎಚ್ಚರಿಕೆ ನೋಟೀಸು ನೀಡಬೇಕೆಂದು ಸೂಚಿಸಲಾಯಿತು.** |
| ವಿಷಯ ಸಂಖ್ಯೆ– 10: | ವಿಶ್ವವಿದ್ಯಾಲಯದ 15 ಬ್ಯಾಂಕ್ ಖಾತೆಗಳ ವಿವರಗಳನ್ನು ಸಿಂಡಿಕೇಟ್ ಸಭೆಗೆ ಒದಗಿಸಲಾಯಿತು. ಸದಸ್ಯರಾದ ಶ್ರೀ ಶ್ರೀನಿವಾಸಯ್ಯ, ಡಾ. ರಾಜೇಶ್, ಡಾ. ದೇವರಾಜು ರವರು ಅಭಿಪ್ರಾಯ ವ್ಯಕ್ತಪಡಿಸಿ ಖಾಸಗಿ ಬ್ಯಾಂಕುಗಳಲ್ಲಿ ಇರುವ ಖಾತೆಗಳನ್ನು, ಚಾಲನೆಯಲ್ಲಿ ಇಲ್ಲದ, ಖಾತೆಗಳನ್ನು ಪ್ರಾರಂಭಿಸಿರುವ ಉದ್ದೇಶ ಪೂರ್ಣಗೊಂಡಿರುವ ಖಾತೆಗಳು ಹಾಗೂ ಅಗತ್ಯಕ್ಕಿಂತ ಹೆಚ್ಚಿನ ಖಾತೆಗಳು ಇದ್ದಲ್ಲಿ ಅವುಗಳನ್ನು ಸಹ ಮುಚ್ಚಲು ಕ್ರಮ ಕೈಕೊಳ್ಳಬೇಕೆಂದು ತಿಳಿಸಿದರು.<br>**ಸಿಂಡಿಕೇಟ್ ನಿರ್ಣಯ:**<br>**ಚರ್ಚೆಯ ನಂತರ ನಿಯಮಾನುಸಾರ ಖಾಸಗಿ ಬ್ಯಾಂಕುಗಳಲ್ಲಿ ಇರುವ ಖಾತೆಗಳನ್ನು, ಚಾಲನೆಯಲ್ಲಿ ಇಲ್ಲದ, ಖಾತೆಗಳನ್ನು ಪ್ರಾರಂಭಿಸಿರುವ ಉದ್ದೇಶ ಪೂರ್ಣಗೊಂಡಿರುವ ಖಾತೆಗಳು ಹಾಗೂ ಅಗತ್ಯಕ್ಕಿಂತ ಹೆಚ್ಚಿನ ಖಾತೆಗಳು ಇದ್ದಲ್ಲಿ ಅವುಗಳನ್ನು ಸಹ ಮುಚ್ಚಲು ಅಗತ್ಯ ಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು.** |

| | |
|---|---|
| ವಿಷಯ ಸಂಖ್ಯೆ– 11: | ಪರೀಕ್ಷಾ ವಿಭಾಗದ E-Governance in Exam Management ಮತ್ತು Examination Process Management ಕುರಿತು ಯೂನಿಕ್ಲೇರ್ ಹಾಗೂ ಈ ಲಾಜಿಸಿಸ್ ಸಂಸ್ಥೆಯೊಂದಿಗೆ ಮಾಡಿಕೊಂಡ ಒಪ್ಪಂದದ ವಿವರಗಳನ್ನು ಸಭೆಗೆ ನೀಡಲಾಯಿತು. ಈ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಯ ಕಾರ್ಯಸೂಚಿಯಲ್ಲಿ ಸೇರಿಸಬೇಕೆಂದು ಸದಸ್ಯರು ನೀಡಿದ ಸಲಹೆಗೆ, ಒಪ್ಪಿಗೆ ನೀಡಲಾಯಿತು. |
| ವಿಷಯ ಸಂಖ್ಯೆ– 12: | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಆವರಣದ ಅಭಿವೃದ್ಧಿಗೆ ಸಂಬಂಧಿಸಿದಂತೆ "ಮಾಸ್ಟರ್ ಪ್ಲಾನ್" ಸಿದ್ಧಪಡಿಸಲು ವಾಸ್ತು ಶಿಲ್ಪಿಗಳಿಂದ (Architects) ಆಸಕ್ತಿ ಅಭಿವ್ಯಕ್ತಿ (Expression of Interest) ಗಾಗಿ ಕಾಮಗಾರಿ ಸಮಿತಿ ಮತ್ತು ಸಿಂಡಿಕೇಟ್ ಸಭೆಗಳು ಅನುಮೋದಿಸಿದ ಟೆಂಡರ್ ದಾಖಲೆಗಳ ಷರತ್ತು ಮತ್ತು ನಿಬಂಧನೆಗಳಲ್ಲಿ E-ಟೆಂಡರ್‌ಗಳನ್ನು ಕರೆಯುವ ಸಂದರ್ಭದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿರುವುದು ಗಮನಕ್ಕೆ ಬಂದಿದ್ದು, ಈ ಬದಲಾವಣೆಗಳನ್ನು ಕಾಮಗಾರಿ ಸಮಿತಿಯ ಮತ್ತು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದಿರುವುದಿಲ್ಲವೆಂದು ಕುಲಪತಿಗಳು ತಿಳಿಸಿದರು. ಟೆಂಡರ್ ದಾಖಲೆಯ ನಿಬಂಧನೆಗಳಲ್ಲಿ ಮಾಡಿರುವ ಬದಲಾವಣೆ ಕುರಿತು ವಿಷಯವನ್ನು ಕಾಮಗಾರಿ ಸಮಿತಿಯು ಪರಶೀಲನೆ ನಂತರ ಸದರಿ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಕುರಿತು ತೀರ್ಮಾನ ಕೈಕೊಳ್ಳಲು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗುವುದು ಎಂದು ಕುಲಪತಿಗಳು ಸಭೆಗೆ ತಿಳಿಸಿದರು.<br><br>ವಿಶ್ವವಿದ್ಯಾಲಯದ ಆವರಣದಲ್ಲಿ ಇರುವ ಖಾಲಿ ಸ್ಥಳ ಅತ್ಯಂತ ಕಡಿಮೆ ಇರುವುದರಿಂದ "ಮಾಸ್ಟರ್ ಪ್ಲಾನ್" ಅಗತ್ಯತೆ ಬಗ್ಗೆ ಕೆಲವು ಸದಸ್ಯರು ವಿವರ ಬಯಸಿದರು. |

| | |
|---|---|
| | ಸದಸ್ಯರಾದ ಡಾ. ಚಂದ್ರನಾಥ್, ಡಾ ಆರ್. ಪಾರ್ವತಿ, ಶ್ರೀ. ಹೆಚ್. ಎನ್. ಹರಿಪ್ರಸಾದ್ ಹಾಗೂ ಶ್ರೀಮತಿ ಜ್ಯೋತಿ ವಿಜಯ್ ರವರು ಈಗಿರುವ ಕಟ್ಟಡಗಳನ್ನು ನವೀಕರಿಸಲು, ಹೊಸ ಕಟ್ಟಡ ನಿರ್ಮಿಸಲು ಹಾಗೂ ಆವರಣವನ್ನು ಆಕರ್ಷಕವಾಗಿ ಸುಂದರೀಕರಿಸಲು "ಮಾಸ್ಟರ್ ಪ್ಲಾನ್" ಅಗತ್ಯವಿದೆ ಎಂದು ತಿಳಿಸಿದರು.<br><br>**ಸಿಂಡಿಕೇಟ್ ನಿರ್ಣಯ:**<br><br>**ಚರ್ಚೆಯ ನಂತರ ಟೆಂಡರ್ ದಾಖಲೆಯ ನಿಬಂಧನೆಗಳಲ್ಲಿ ಮಾಡಿರುವ ಬದಲಾವಣೆಗೆ ಸಂಬಂಧಿಸಿದ ವಿಷಯವನ್ನು ಕಾಮಗಾರಿ ಸಮಿತಿಯು ಪರಶೀಲನೆಗೆ ಮಂಡಿಸಲು, ಕಾಮಗಾರಿ ಸಮಿತಿಯ ಶಿಫಾರಸ್ಸುಗಳ ಪ್ರಕಾರ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಕುರಿತು ತೀರ್ಮಾನ ಕೈಕೊಳ್ಳಲು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಬೇಕೆಂದು ತೀರ್ಮಾನಿಸಲಾಯಿತು.** |
| ಸಾಮಾನ್ಯ ಚರ್ಚೆ | 2020-21 ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಸಂಯೋಜನೆ ಪ್ರಕ್ರಿಯೆ ಕುರಿತು.<br>ಸಂಯೋಜನೆ ಪ್ರಕ್ರಿಯೆಯನ್ನು ಡಿಜಿಟಲೀಕರಣ ಹಾಗೂ ಆನ್‌ಲೈನ್ ಅರ್ಜಿ ಸಲ್ಲಿಕೆ ಸಂಬಂಧಿಸಿದಂತೆ ದಿನಾಂಕ: 23.12.2019 ಸಿಂಡಿಕೇಟ್ ಸಭೆಯು ರಚಿಸಲಾದ ಸಮಿತಿಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಸಮಿತಿಯಲ್ಲಿ ಚರ್ಚಿಸಲಾದ ವಿವರಗಳನ್ನು ಸಭೆಗೆ ತಿಳಿಸಿದರು. ಸಂಯೋಜನಾ ಪ್ರಕ್ರಿಯ ಸಮಯದ ಮಿತಿಯೊಳಗೆ ಪೂರ್ಣಗೊಳಿಸಬೇಕಾದ ಅನಿವಾರ್ಯತೆ ಇರುವುದರಿಂದ, ಕರ್ನಾಟಕ ಸರ್ಕಾರದ KTPP Act 4G ಅಡಿಯಲ್ಲಿ E-Tender ಪ್ರಕ್ರಿಯೆಯಿಂದ ವಿನಾಯಿತಿ ಪಡೆದ IT ಸೇವೆ ಒದಗಿಸುವ ಸಂಸ್ಥೆಯ ಕುರಿತು ವಿಚಾರಿಸಲಾಯಿತು, ಕರ್ನಾಟಕ ಸರ್ಕಾರದ E-Governance ಇಲಾಖೆ ಅಡಿಯಲ್ಲಿರುವ Center for Smart Governance IT ಸಂಸ್ಥೆಯು 4G ವಿನಾಯಿತಿ ಹೊಂದಿರುವುದರಿಂದ ಅವರನ್ನು ಸಂಪರ್ಕಿಸಿ ಸಂಯೋಜನಾ ಪ್ರಕ್ರಿಯೆಗೆ ಬೇಕಾದ ಮಾಹಿತಿಯನ್ನು ಒದಗಿಸಲಾಯಿತು. |

| | |
|---|---|
| | ಸದರಿ ಸಂಸ್ಥೆಯವರು ಈ ಕೆಲಸ ನಿರ್ವಹಿಸಲು ಸಮರ್ಥರಾಗಿರುವುದನ್ನು ಪರಿಗಣಿಸಿ ಅಗತ್ಯವಾದ Module ಗಳನ್ನು ಸಿದ್ಧಪಡಿಸಲು ಕೋರಲಾಗಿದೆ. ಸದರಿ ಸಂಸ್ಥೆಯವರು ನೀಡುವ Presentation ಸಭೆ ಪರಾಮರ್ಶಿಸ ಬೇಕೆಂದು ಕೋರಿದರು. ಅದರಂತೆ SCG ಸಂಸ್ಥೆಯ ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಿ, ಅವರು ಸಿದ್ಧಪಡಿಸಿದ Module ಗಳನ್ನು ಹಾಗೂ ಇದಕ್ಕಾಗಿ ತಗಲುವ ವೆಚ್ಚ ಕುರಿತು ವಿವರಗಳನ್ನು ಒದಗಿಸಿದರು. ಇದಕ್ಕಾಗಿ ರೂ. 42.18 ಲಕ್ಷಗಳ ಅಂದಾಜು ವೆಚ್ಚದ ವಿವರಗಳನ್ನು ಹಾಗೂ ವಾರ್ಷಿಕ ರೂ.7.15 ಲಕ್ಷಗಳ Application Support Charges ಕುರಿತಂತೆ ಮಾಹಿತಿಯನ್ನು ನೀಡಿದರು. ಈ ಯೋಜನೆ ಪೂರ್ಣಗೊಳಿಸಲು 4 ತಿಂಗಳ ಕಾಲಾವಕಾಶದ ಅವಶ್ಯಕತೆ ಇದ್ದು, ವಿಶ್ವವಿದ್ಯಾಲಯದ ಅಗತ್ಯಕ್ಕೆ ಅನುಗುಣವಾಗಿ ಪ್ರಥಮ 2 Module ಗಳನ್ನು ಮಾರ್ಚ ತಿಂಗಳ ಮೊದಲ ವಾರದಲ್ಲಿ ಸಿದ್ಧಪಡಿಸಬಹುದೆಂದು ತಿಳಿಸಿದರು. ಈ ಯೋಜನೆಯ Knowledge Transfer, Source Code Data ಇತ್ಯಾದಿಗಳು ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಡುತ್ತವೆಯೆಂದು ತಿಳಿಸಿದರು.<br><br>ಡಾ. ಬಿ.ಎ. ಅನುರಾಧ, ಡಾ. ಇ. ಬಿ. ರಾಜೇಶ್, ಡಾ. ಆರ್. ಪಾರ್ವತಿ, ಡಾ. ದೇವರಾಜ್, ಶ್ರೀ ಶ್ರೀನಿವಾಸಮೂರ್ತಿ, ಡಾ. ಎಂ. ಪಾಂಡುರಂಗಪ್ಪ, ಡಾ. ಚಂದ್ರನಾಥ್ ರವರು, ಸಂಯೋಜನಾ ಪ್ರಕ್ರಿಯೆಯನ್ನು ಡಿಜಿಟಲೀಕರಣಗೊಳಿಸುವುದು ಅನಿವಾರ್ಯ, ಆದರೆ ಈಗಾಗಲೇ ಸಾಕಷ್ಟು ಸಮಯ ಕಳೆದು ಹೋಗಿರುವುದರಿಂದ, ಈ ಹಂತದಲ್ಲಿ ಯಾವುದೇ ಕಾರಣದಿಂದ ವಿಳಂಬವಾದಲ್ಲಿ ಅದು ಕಾಲೇಜುಗಳ ಮೇಲೆ ಗಂಭೀರವಾದ ಪರಿಣಾಮ ಬೀರುವುದಲ್ಲದೆ ಸರ್ಕಾರ ನಿಗದಿಪಡಿಸಿದ ದಿನಾಂಕದೊಳಗೆ ಸಂಯೋಜನಾ ಪ್ರಕ್ರಿಯೆ ಮುಗಿಸಲು ಕ್ರಮಕೈಕೊಳ್ಳಬೇಕಾಗಿದೆ ಎಂದು ತೀಳಿಸಿದರು.<br><br>ಸದಸ್ಯರಾದ ಡಾ. ಇ. ಬಿ. ರಾಜೇಶ್ ಹಾಗೂ ಶ್ರೀ. ಟಿ. ಹೆಚ್. ಶ್ರೀನಿವಾಸಯ್ಯ ನವರು ಈ ಕುರಿತು ಕೂಲಂಕುಷವಾಗಿ ಚರ್ಚಿಸಬೇಕಾಗುತ್ತದೆ ಅಲ್ಲದೇ ಸಮಿತಿ ತನ್ನ ವರದಿ ನೀಡಿದ ನಂತರ ಅದನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ತೀರ್ಮಾನ ಕೈಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು. ಇದಕ್ಕಾಗಿ ಒಂದು ವಿಶೇಷ ಸಭೆ ಕರೆಯಬೇಕೆಂದು ಶ್ರೀ. ಹೆಚ್. ಎನ್. ಹರಿಪ್ರಸಾದ್ ತಿಳಿಸಿದರು. |

| | |
|---|---|
| | ಸಮಯದ ಅಭಾವದಿಂದ ಈ ವರ್ಷಕ್ಕೆ ಮಾತ್ರ ಸೀಮಿತಗೊಳಿಸಿ Manual Affiliation Process ಪ್ರಕಾರ ಸಂಯೋಜನೆ ಪ್ರಕ್ರಿಯೆ ಕೈಕೊಂಡು ಮುಂದಿನ ವರ್ಷದಿಂದ ಡಿಜಿಟಲೀಕರಣಗೊಂಡ ಆನ್ ಲೈನ್ ಸಂಯೋಜನೆ ವ್ಯವಸ್ಥೆ ಅಳವಡಿಸಿಕೊಳ್ಳಬಹುದೆಂದು ಹೆಚ್ಚಿನ ಸಂಖ್ಯೆಯ ಸದಸ್ಯರು ಅಭಿಪ್ರಾಯ ಪಟ್ಟರು.<br><br>**ಸಿಂಡಿಕೇಟ್ ನಿರ್ಣಯ:**<br><br>**ಚರ್ಚೆಯ ನಂತರ ಈ ವರ್ಷದ ಮಟ್ಟಿಗೆ (2020-21 ಸಾಲಿಗೆ) Manual Affiliation Process ಪ್ರಕಾರ ಸಂಯೋಜನೆ ಪ್ರಕ್ರಿಯೆ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು.**<br><br>**ಮುಂದಿನ ವರ್ಷಕ್ಕಾಗಿ Digitalization of Online Affiliation Process ಕುರಿತು ರಚಿಸಲಾದ ಸಮಿತಿ ತನ್ನ ವರದಿಯನ್ನು ಸಲ್ಲಿಸಬೇಕೆಂದು ಸಿಂಡಿಕೇಟ್ ಸಭೆ ಸೂಚಿಸಿತು.** |

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/-
**ಕುಲಸಚಿವರು**

ಸಹಿ/-
**ಕುಲಪತಿಗಳು**

5/2/2020
**ಕುಲಸಚಿವರು**
**ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ**